ಸಾಮಾನ್ಯವಾಗಿ ರೇಷ್ಮೆ ಬಟ್ಟೆಯಿಂದ ಚಂದದ ಬಾರ್ಡರ್ ಬಳಸಿ ಹೊಲಿಯುವ ಲಂಗ ದಾವಣಿಗೆ ಸೀರೆ ಪಲ್ಲು ಬಳಸಿದರೂ ಹೊಸ ನೋಟ ನೀಡಬಹುದು. ಚಿಟ್ಟೆಯ ರೆಕ್ಕೆಯ ಆಕಾರದಲ್ಲಿ ಲಂಗ ಹೊಲಿದು ಒಂದಿಷ್ಟು ಚಿಪ್ಪುಗಳನ್ನು ಅಳವಡಿಸಿ ಹೊಲಿದರೆ ಬಂಜೋರಾ ಸ್ಟೈಲ್ ತಯಾರು. ಹರಳು, ಕುಂದನ್, ಮುತ್ತುಗಳಿಂದ ಕುಸುರಿ ಮಾಡಿದ ಲಂಗಕ್ಕೆ ಪ್ಲೇನ್ ಬ್ಲೌಸ್ ಹೊಸದಾಗಿ ಕಾಣುತ್ತದೆ.

ಬ್ಲೌಸ್‌ಗಳಲ್ಲಿ ಕೋಲ್ಡ್ ಸ್ಲೀವ್, ತ್ರೀ ಫೋರ್ತ್ ಸ್ಲೀವ್, ಫುಲ್ ಸ್ಲೀವ್, ಸ್ಲೀವ್‌ಲೆಸ್, ರೆಗ್ಲಾನ್ ಸ್ಲೀವ್ ಧರಿಸಬಹುದು. ಇದೇ ಮಾದರಿಯನ್ನು ಉಲ್ಟಾ ಮಾಡಿ, ಪ್ಲೇನ್ ಲಂಗದ ಮೇಲೆ ಕಸೂತಿ ಮಾಡಿದ ಬ್ಲೌಸ್ ಧರಿಸಬಹುದು. ಜಾರ್ಜೆಟ್, ಕ್ರೇಪ್, ಕಲಂಕಾರಿ, ನೆಟ್ಟೆಡ್, ಕ್ರಶ್ಡ್, ಟಿಶ್ಯೂ ಬ್ರಾಕೆಟ್, ಗೊಟ್ಟಾ ವಿನ್ಯಾಸಗಳು ಫ್ಯಾಷನ್ ಲೋಕದಲ್ಲಿ ಸದ್ದು ಮಾಡುತ್ತಿವೆ.

ದುಪಟ್ಟಾ ಅಥವಾ ದಾವಣಿ ಧರಿಸುವ ಪ್ಯಾಟರ್ನ್‌ನಲ್ಲಿ ಬದಲಾವಣೆ ಮಾಡಿಕೊಂಡು ನಿಮ್ಮ ಸೃಜನಶೀಲತೆ ಮೆರೆಯಬಹುದು. ಚಂದದ ಕುಸುರಿಯ ದುಪಟ್ಟಾವನ್ನು ಬಲಗಡೆ ಹಾಕಿದರೆ ಗಾಗ್ರಾದಂತೇ ಕಾಣುತ್ತದೆ. ಎರಡೂ ಕಡೆ ನಿರಿಗೆ ಬರುವಂತೆ ಧರಿಸಿ ನೆರಿಗೆಗಳಿಗೆ ಪಿನ್ ಹಾಕಿ ಸೆಟ್ ಮಾಡಬಹುದು. ಸೀರೆ ಉಡಲು ಕಷ್ಟ ಮತ್ತು ಓಡಾಡಲು ಕಸಿವಿಸಿ ಎನ್ನುವವರಿಗಾಗಿಯೇ ಸೀರೆ ಸ್ಟೈಲ್‌ನಲ್ಲಿ ಉದ್ದನೆಯ ಲಂಗ ದಾವಣಿಗಳು ಮಾರುಕಟ್ಟೆಗೆ ಬಂದಿವೆ. ಸಿನಿಮಾದಲ್ಲಿ ಮೆರೆಯುತ್ತಿದ್ದ ಈ ಸೀರೆ ಲಂಗ ದಾವಣಿ ಸಾಮಾನ್ಯರಿಗೂ ಕೈಗೆಟುಕುವ ಬೆಲೆಯಲ್ಲಿ ಲಭ್ಯವಿದೆ.

### ಒಂದಿಷ್ಟು ಟಿಪ್ಸ್

- ಎಂಬ್ರಾಯಿಡರಿ ಲಂಗ ದಾವಣಿಯನ್ನು ಡ್ರೈ ವಾಶ್ ಮಾತ್ರ ಮಾಡಿಸಿ. ಮನೆಯಲ್ಲಿಯೇ ತೊಳೆಯುವಿರಾದರೆ ಎಚ್ಚರ ಬಣ್ಣ, ಕಸೂತಿ ಹಾಳಾಗದಂತೆ ಎಚ್ಚರವಹಿಸಿ.
- ಹಬ್ಬಗಳಲ್ಲಿ ಧರಿಸಿದ ನಂತರ ಒಮ್ಮೆ ಎಳೆಬಿಸಿಲಿಗೆ ಹಾಕಿ ಮಡಚಿಡಿ. ನೀರಿನ ಪಸೆ ಏನಾದರೂ ಇದ್ದರೆ ಹಾಗೇ ಬೀರುವಿನಲ್ಲಿ ಇಡುವುದರಿಂದ ಫಂಗಸ್ ಬೆಳೆದು ಡ್ರೆಸ್ ಹಾಳಾಗುತ್ತದೆ.
- ತೆಳ್ಳಗೆ ಇರುವವರಿಗೆ ನೆಟ್ಟೆಡ್, ಕ್ರಶ್ಡ್ ಮೆಟೀರಿಯಲ್ ಲಂಗ ದಾವಣಿ ಚಂದ ಕಾಣುತ್ತದೆ.
- ದಪ್ಪ ಇರುವವರಿಗೆ ಕಾಟನ್, ರೇಷ್ಮೆ ಬಟ್ಟೆಯ ಲಂಗದಾವಣಿ ಒಪ್ಪುತ್ತದೆ. ಲೈಟ್ ವೇಟ್ ಇಷ್ಟಪಡುವಿರಾದರೆ ಪ್ಲೇನ್ ಲಂಗ ದಾವಣಿ ಆಯ್ಕೆ ಮಾಡಿ.
- ಕುಸುರಿ, ಎಂಬ್ರಾಯಿಡರಿ ವರ್ಕ್ ಡಿಸೈನ್‌ಗಳಿರುವ ಲಂಗ ದಾವಣಿ ಹೆಚ್ಚು ಭಾರ ಇರುತ್ತದೆ.
- ಹಬ್ಬ ಹರಿದಿನಗಳಲ್ಲಿ ಸಾಂಪ್ರದಾಯಿಕ ಶೈಲಿಯ ಉಡುಪಿನ ಹುಡುಕಾಟದಲ್ಲಿದ್ದರೆ ವೆರೈಟಿ ಡಿಸೈನ್ ಲಂಗ ದಾವಣಿ ನಿಮಗೆ ಉತ್ತಮ ಆಯ್ಕೆ. ನಿಮ್ಮ ಅಗತ್ಯ ಮತ್ತು ಬಜೆಟ್‌ಗೆ ತಕ್ಕಂತೇ ಖರೀದಿಸಬಹುದು. ■

# ಒನ್ ಶೋಲ್ಡರ್ ಉಡುಪು

ಫ್ಯಾಷನ್ ಪ್ರಪಂಚದಲ್ಲಿ ಒಮ್ಮೆ ಹುಡುಕಿದರೆ ಕಣ್ಣು ಕೋರೈಸುತ್ತವೆ ಈ 'ಒನ್ ಶೋಲ್ಡರ್ ಉಡುಪು'. ಉಡುಪಿನ ತೋಳು ಒಂದೇ ಭುಜವನ್ನು ಕವರ್ ಮಾಡಿರುವ ಇದು ನಗರ ಪ್ರದೇಶಗಳ ಕನ್ಯಾಮಣಿಗಳಿಗೆ ಇಷ್ಟ. ನೈಲಾನ್, ಸಿಲ್ಕ್, ವೆಲ್ವೆಟ್, ಸ್ಯಾಟಿನ್, ಲಿನೆನ್, ರಿಯಾನ್‌ಗಳಂತಹ ವೈವಿಧ್ಯಮಯ ಬಟ್ಟೆಗಳಲ್ಲಿ ಡಿಸೈನ್ ಮಾಡಲಾಗುತ್ತದೆ. ಬಾಲಿವುಡ್, ಹಾಲಿವುಡ್, ಫ್ಯಾಷನ್ ಶೋಗಳಲ್ಲಿ ಕಾಣಸಿಗುತ್ತಿದ್ದ ಈ ಡ್ರೆಸ್‌ಗಳೀಗ ವಾರಾಂತ್ಯದ ಪಾರ್ಟಿಗಳಲ್ಲಿ ಜನಪ್ರಿಯವಾಗಿವೆ. ಗ್ಲ್ಯಾಮರ್ ಲುಕ್ ನೀಡುವ ಉಡುಪೂ ಇದಾಗಿದೆ.

ಒನ್ ಶೋಲ್ಡರ್ ಡ್ರೆಸ್‌ಗಳು ತಕ್ಷಣ ನೋಡಲು ಒಂದೇ ತರ ಎನಿಸಿದರೂ ಸಾಕಷ್ಟು ವೈವಿಧ್ಯಗಳವು ಲಭ್ಯವಿವೆ. ಪ್ರಿಂಟ್‌ಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದು, ನಿಮ್ಮ ಇಷ್ಟಕ್ಕೆ ಅನುಗುಣವಾಗಿ ಖರೀದಿಸಬಹುದು. ಪ್ರೋಮೊ ಒನ್ ಶೋಲ್ಡರ್ ಡ್ರೆಸ್, ಫಿಟ್ ಆ್ಯಂಡ್ ಫ್ಲೇರ್ ಡ್ರೆಸ್, ಬಾಡಿಕಾನ್ ಡ್ರೆಸ್, ಶಿರ್ರೆಡ್ ಡ್ರೆಸ್, ಟೀ ಲೆಂಥ್ ಒನ್ ಶೋಲ್ಡರ್ ಡ್ರೆಸ್, ಶಿಫ್ಟ್ ಒನ್ ಶೋಲ್ಡರ್ ಡ್ರೆಸ್, ಆಫ್ ದಿ ಶೋಲ್ಡರ್ ಡ್ರೆಸ್, ಕೋಲ್ಡ್ ಶೋಲ್ಡರ್ ಡ್ರೆಸ್, ರಫಲ್ಡ್ ಒನ್ ಶೋಲ್ಡರ್ ಡ್ರೆಸ್, ರಿಂಕಲ್ ಆ್ಯಂಡ್ ಲೇಯರ್ಡ್ ಡ್ರೆಸ್... ಹೀಗೆ ಹಲವಾರು ಬಗೆಯಲ್ಲಿ ದೊರೆಯುತ್ತವೆ.

### ಆಯ್ಕೆ ಹೇಗೆ?

ಚೂಡಿದಾರ, ಕುರ್ತಾ, ಟಾಪ್‌ಗಳಂತೆಯೇ ಗಡಿಬಿಡಿಯಲ್ಲಿ ಆನ್‌ಲೈನ್‌ನಲ್ಲಿ ತರಿಸಿಕೊಂಡು ಹಾಗೇ ಪಾರ್ಟಿಗೆ ಹೊರಡಬೇಡಿ. ಮೊದಲು ನಿಮ್ಮ ಅಭಿರುಚಿಗೆ ತಕ್ಕಂತೆಯೇ ಡ್ರೆಸ್ ಆಯ್ಕೆ ಮಾಡಿಕೊಳ್ಳಿ. ನಿಮಗೆ ಫಿಟ್ ಆಗುತ್ತಿದೆಯೇ, ಧರಿಸಿ ಓಡಾಡಲು ಕಂಫರ್ಟ್ ಇದೆಯೇ ಎಂಬುದನ್ನು ಮೊದಲು ನೋಡಿಕೊಳ್ಳಿ.

ಕಲರ್, ಪ್ಯಾಟರ್ನ್, ಲೆಂಥ್ ಯಾವುದೂ ನಿಮಗೆ ಮುಜುಗರ ಉಂಟು ಮಾಡುವಂತಿರಬಾರದು. ಟ್ರಯಲ್ ನೋಡಿಕೊಂಡು ನಂತರ ಖರೀದಿಸಿ. ಆನ್‌ಲೈನ್ ಶಾಪಿಂಗ್ ಸೈಟ್‌ಗಳಲ್ಲಿ ಕೊಳ್ಳುತ್ತೀರೆಂದರೆ ವಾಪಸ್ ಮಾಡುವ ಅಥವಾ ಬದಲಾವಣೆ ಮಾಡುವ ಆಯ್ಕೆ ಇರಲಿ. ಮುಖ್ಯವಾಗಿ ಓಪನ್ ಶೋಲ್ಡರ್ ಭಾಗದಲ್ಲಿ ಒಳ ಉಡುಪು ಕಾಣದಂತೆ ಎಚ್ಚರವಹಿಸಿ.

ಫಾರ್ಮಲ್ ಲುಕ್ ಇಷ್ಟಪಡುವಿರಾದರೆ ಉದ್ದ ಇರುವ ಸ್ಲೀವ್ ಆಯ್ಕೆ ಮಾಡಿ. ಪ್ಲಂಪಿಯಾಗಿ ಅವರ್ ಗ್ಲಾಸ್ ಶೇಪ್ ಇರುವವರು ಬಾಡಿಕಾನ್, ಒನ್ ಶೋಲ್ಡರ್ ಡ್ರೆಸ್ ಆಯ್ಕೆ ಮಾಡಿ. ಸ್ಲಿಮ್ ಆಗಿ ತೆಳ್ಳಗಿರುವವರಿಗೆ ಈ ಡ್ರೆಸ್ ಸೂಟ್ ಆಗುವುದಿಲ್ಲ.



### ಕೇಶಶೈಲಿ ಹೀಗಿರಲಿ...

ನಿಮ್ಮದು ಉದ್ದ ತಲೆಗೂದಲು ಆಗಿದ್ದರೆ ಸೈಡ್ ಕ್ಲಿಪ್ ಹಾಕಿಕೊಂಡು ಶೋಲ್ಡರ್ ಮೇಲೆ ಇಳಿಬಿಡಿ. ಶೋಲ್ಡರ್ ಸ್ಲೀವ್ ಇಲ್ಲದ ಕಡೆಯಲ್ಲಿ ಕೂದಲನ್ನು ಇಳಿಬಿಟ್ಟು, ಶೋಲ್ಡರ್ ಕಾಣದ ಹಾಗೆ ಕೂದಲನ್ನು ಸೆಟ್ ಮಾಡಿಕೊಳ್ಳಬಹುದು.

ಕೂದಲು ಗಿಡ್ಡ ಇದ್ದಾಗ ಗಾಳಿಯಲ್ಲಿ ತೇಲಿ ಬಿಟ್ಟರೆ ಚಂದ ಕಾಣುತ್ತದೆ. ಕೂದಲನ್ನು ಕರ್ಲ್ ಮಾಡಿ, ಮುಚ್ಚಿದ ಶೋಲ್ಡರ್ ಮೇಲೆ ಪಿನ್ ಮಾಡಿ ಗ್ಲಾಮಸರ್ ಲುಕ್ ನಿಮ್ಮದಾಗಿಸಿಕೊಳ್ಳಿ. ಸಡಿಲವಾದ ಜಡೆ ಹೆಣೆದು ಶೋಲ್ಡರ್ ಮುಂದಕ್ಕೆ ಇಳಿಬಿಟ್ಟಾಗಲೂ ಸ್ಪೆಷಲ್ಲಾಗಿ ಕಾಣಬಹುದು. ಹೇರ್ ಬ್ಯಾಂಡ್, ಫಂಕಿ ಹೇರ್ ಕ್ಲಿಪ್‌ಗಳನ್ನು ನಿಮ್ಮ ಅಭಿರುಚಿಗೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಿ.

ಈ ಡ್ರೆಸ್ ಫ್ಯಾಷನಬಲ್ ಇರುವುದರಿಂದ ಜಾಸ್ತಿ ಒಡವೆಗಳನ್ನು ಧರಿಸಬಾರದು. ಒನ್ ಶೋಲ್ಡರ್ ಡ್ರೆಸ್ ಧರಿಸಿದಾಗ ಬೆಲ್ಟ್ ಹಾಕಿದರೆ ಎಲಿಗೆಂಟ್ ಲುಕ್ ಖಂಡಿತ. ತೆಳ್ಳಗಿನ ಲೆದರ್, ಫ್ಯಾಬ್ರಿಕ್, ಬೆಲ್ಟ್‌ಗಳನ್ನು ಡ್ರೆಸ್‌ಗೆ ಅನುಗುಣವಾಗಿ ಧರಿಸಿ. ಕಿವಿಗೆ ಹ್ಯಾಂಗಿಂಗ್, ಸ್ಟಡ್ಸ್ ತರಹದ ಇಯರ್ ರಿಂಗ್ ಚಂದ ಕಾಣುತ್ತದೆ. ಬಳೆಯ ಬದಲಾಗಿ ಬ್ರೇಸ್ಲೆಟ್ ಇರಲಿ. ಹ್ಯಾಂಡ್ ಬ್ಯಾಗ್ ಅಥವಾ ಕ್ಲಚ್ ಸಹ ಡ್ರೆಸ್‌ಗೆ ತಕ್ಕಂತೆ ಟ್ರೆಂಡಿಯಾಗಿರಲಿ. ಹೈ ಹೀಲ್, ಶೂ, ಸ್ಯಾಂಡಲ್ಸ್ ಉಡುಪಿಗೆ ಅನುಗುಣವಾಗಿ ಧರಿಸಿ. ನೆನಪಿಡಿ, ಡ್ರೆಸ್ ಯಾವುದೇ ಇರಲಿ, ಆರಾಮದಾಯಕವಾಗಿರಬೇಕು. ■